## **ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ. ಕರಿಯಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನೂಲೇನೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/UPLOK/BD/7467/2014/DRE-5, ದಿನಾಂಕ: 25.01.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 13.01.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಈ ದೂರನ್ನು ಶ್ರೀ. ಜೆ. ಧನಂಜಯ, ಗ್ರಾಮಪಂಚಾಯಿತಿ ಸದಸ್ಯರು, ನೂಲೇನೂರಿನ ನಿವಾಸಿ, ಹೊಳಲ್ಕೆರೆ ತಾಲ್ಲೂಕು, ಇವರು ಶ್ರೀ. ಕರಿಯಪ್ಪ, ಪಿ.ಡಿ.ಓ ನೂಲೇನೂರು ಗ್ರಾಮ ಪಂಚಾಯಿತಿ, (2) ಶ್ರೀ. ಷಣ್ಮುಖಪ್ಪ, ಅಧ್ಯಕ್ಷರು, ನೂಲೇನೂರು ಗ್ರಾಮ ಪಂಚಾಯಿತಿ ಹೊಳಲ್ಕೆರೆ ತಾಲ್ಲೂಕು, ಇವರ ವಿರುದ್ಧ ಸಲ್ಲಿಸಿದ್ದಾರೆ.

2. ದೂರುದಾರರು ತಮ್ಮ ದೂರಿನಲ್ಲ, 13ನೇ ಹಣಕಾಸು ಯೋಜನೆಯ ವರ್ಗ 1 ಮತ್ತು ಬಿ.ಆರ್.ಜಿ.ಎಫ್. ಗೆ ಸಂಬಂಧಿಸಿದ 20 ಲಕ್ಷ ರೂಪಾಯಿಗಳನ್ನು ಎದುರುದಾರರು ದುರುಪಯೋಗಪಡಿಸಿಕೊಂಡಿದ್ದಾರೆ. 6 ತಿಂಗಳಿಂದ ಸದಸ್ಯರ ಸಭೆ ಕರೆಯದೆ ಎದುರುದಾರರು ಪಂಚಾಯಿತಿ ಖಾತೆಯಲ್ಲಿ ಇದ್ದ 12 ಲಕ್ಷ ಹಣವನ್ನು ಯಾವುದೇ ಅಭಿವೃದ್ಧಿ ಕಾಮಗಾರಿ ಮಾಡದೆ ಪಂಚಾಯಿತಿ ಸಿಬ್ಬಂದಿಗಳ ಹೆಸರಿಗೆ ಪ್ರತಿದಿನ ಚೆಕ್ಕು ಕೊಟ್ಟು ಹಣ ನಗದೀಕರಿಸಿರುತ್ತಾರೆ. ರಂಗಾಪುರದ ವೀರಸೌಧದದ ದುರಸ್ತಿ ಹೆಸರಿನಲ್ಲಿ 3 ಲಕ್ಷ ದುರುಪಯೋಗಪಡಿಸಿದ್ದಾರೆ, ಮೋಟಾರ್ ಪಂಪ್ ದುರಸ್ತಿ ಹೆಸರಿನಲ್ಲಿ 4 ಲಕ್ಷ ರೂ. ದುರುಪಯೋಗವಾಗಿದೆ. ರಾಜ್ಯಸರ್ಕಾರದಿಂದ ಮಂಜೂರಾದ 6 ಲಕ್ಷಗಳನ್ನು ಕಲ್ಯಾಣಮಂಟಪಕ್ಕೆ ಕೊಟ್ಟಿದ್ದಾರೆ, ಎಂದೆಲ್ಲ ಆಪಾದಿಸಿ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ.

3. ಸದರಿ ದೂರನ್ನು ತನಿಖೆಗೆ ಕೈಗೆತ್ತಿಕೊಂಡು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿತ್ರದುರ್ಗ ಇವರಿಗೆ ವಹಿಸಿ ತನಿಖೆ ನಡೆಸಿ ವರದಿ ಸಲ್ಲಿಸಲು ಕೋರಲಾಗಿ, ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, 12 ಲಕ್ಷ ಮೂಲಭೂತ ಸೌಕರ್ಯಗಳಾದ, ಕುಡಿಯುವ ನೀರು, ನೈರ್ಮಲ್ಯ, ವಿದ್ಯುತ್, ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳಿಗೆ ಭರಿಸಲಾಗಿದೆ, ವೀರಸೌದದ ದುರಸ್ತಿಗೆ 18 ಲಕ್ಷ ಖರ್ಚು ಮಾಡಿದೆ, ವರ್ಗ 1 ರಲ್ಲಿ ಸಿಬ್ಬಂದಿಗಳಿಗೆ ವೇತನ ನೀಡಲಾಗಿದೆ. ಸಮುದಾಯ ಭವನದ ನಿರ್ಮಾಣಕ್ಕೆ ಭೂಸೇನಾ ನಿಗಮ ಚಿತ್ರದುರ್ಗ ಇವರಿಗೆ ಚೆಕ್ ಮೂಲಕ 6 ಲಕ್ಷ ನೀಡಿದೆ ಎಂದು ಹೇಳಿದ್ದಾರೆ.

4. ಸದರಿ ವರದಿಯ ಮೇಲೆ ದೂರುದಾರರು ಯಾವುದೇ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿತ್ರದುರ್ಗ, ಅವರ ವರದಿ ಪರಿಶೀಲಿಸಿದಾಗ ಯಾವುದೇ ಸಭೆಗಳನ್ನು ಕರೆಯದೆ ಸದಸ್ಯರನ್ನು ಸದರಿ ಸಭೆಗಳಿಗೆ ಆಹ್ವಾನಿಸದೆ ಅವರ ಒಪ್ಪಿಗೆ ಇಲ್ಲದೆ ಈ ಕಾಮಗಾರಿಗಳನ್ನು ಮಾಡಿರುವುದಾಗಿ ಹೇಳುತ್ತಾರೆ, ಆದರೆ ಇದರ ಬಗ್ಗೆ ತನಿಖಾಧಿಕಾರಿಯು ಯಾವುದೇ ತನಿಖೆ ಮಾಡಿಲ್ಲ, ಆದ್ದರಿಂದ 1 ಮತ್ತು 2ನೇ ಎದುರುದಾರರನ್ನು ಖುದ್ದು ಹಾಜರಾತಿಗೆ ಸಮನ್ಸ ಕಳುಹಿಸಲಾಗಿ, 1 ಮತ್ತು 2ನೇ ಎದುರುದಾರರು ಹಾಜರಾಗಿದ್ದು 2ನೇ ಎದುರುದಾರರು ತಾನು ಈಗಾಗಲೇ ಮಾಜಿ ಅಧ್ಯಕ್ಷನಾಗಿರುವುದಾಗಿ ಹೇಳುತ್ತಾರೆ. 1ನೇ ಎದುರುದಾರರ ವರದಿ ಸಲ್ಲಿಸಿ, ಯಾವುದಕ್ಕೆ ಎಷ್ಟು ಹಣ ಖರ್ಚಾಗಿದೆಯೆಂದು ವಿವರ ಸಲ್ಲಿಸಿದ್ದು, ಅದರೊಂದಿಗೆ ದಾಖಲಾತಿಗಳನ್ನು ಸಲ್ಲಿಸಿದ್ದರೆ ಹೊರತು ಮೀಟಿಂಗ್ ಕರೆಯಲಾಗಿತ್ತೇ, ಕಾಮಗಾರಿಗಳನ್ನು ಸದರಿ ಮೀಟಿಂಗ್‌ಗಳಲ್ಲಿ ಅನುಮೋದಿಸಲಾಗಿತ್ತೇ ಎನ್ನುವ ವಿವರ ಕೊಟ್ಟಿಲ್ಲ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿತ್ರದುರ್ಗ, ಅವರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯಿತಿಯ ಖರ್ಚುಗಳಿಗೆ ತಮ್ಮ ಪೂರ್ವಾನುಮತಿ ಪಡೆದಿಲ್ಲವೆಂದು ಹೇಳಿರುತ್ತಾರೆ. ಈ ಬಗ್ಗೆ ವರದಿ ನೀಡಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶಿಸಲಾಗಿ, ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವರದಿಯಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿತ್ರದುರ್ಗ, ಅವರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯಿತಿಯ ಖರ್ಚುಗಳಿಗೆ ತಮ್ಮ ಪೂರ್ವಾನುಮತಿ ಪಡೆದಿಲ್ಲವೆಂದು ಹೇಳಿರುತ್ತಾರೆ. ಈ ಬಗ್ಗೆ ವರದಿ ನೀಡಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶಿಸಲಾಗಿ, ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವರದಿಯಲ್ಲಿ, ಎದುರುದಾರರು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 2006 ರ ಅಧ್ಯಾಯ 9 ರ ನಿಯಮ ಸಂ. 71 ರಿಂದ 94 ಗಳನ್ನು ಉಲ್ಲಂಘಿಸಿದ್ದಾರೆ, ಭೂಸೇನಾ ನಿಗಮದವರಿಗೆ ನೀಡಿದ ಚೆಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ಕೊಡಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಪಂಚಾಯತ್ ರಾಜ್ ಕಾಯ್ದೆ ಮತ್ತು ಸರ್ಕಾರದ ಸುತ್ತೋಲೆಗಳಿಗನುಗುಣವಾಗಿ ಕಾರ್ಯನಿರ್ವಹಿಸಿಲ್ಲವೆಂದೂ, ಹೇಳಿಕೆ ಕಳುಹಿಸಿರುತ್ತಾರೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಲಾಗಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳ ಪೂರ್ವಾನುಮತಿ ಇಲ್ಲದೆ 12 ಲಕ್ಷ ರೂ.ಗಳ ಖರ್ಚು ಮತ್ತು ವೀರಸೌಧ ದುರಸ್ತಿ ಖಚ್ಚು ಸಿಬ್ಬಂದಿಗಳ ವೇತನ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ನೈರ್ಮಲ್ಯ, ಇವುಗಳನ್ನು ನಿರ್ವಹಿಸಿದ್ದು, ಕರ್ನಾಟಕ ಪಂಚಾಯತ್ ರಾಜ್ ನಿಯಮ 2006 ರ ನಿಯಮ ಉಲ್ಲಂಘನೆಯಾಗಿದೆ, ಇದೂ ಅಲ್ಲದೆ, ಪಂಚಾಯತಿ ಸಭೆಗಳನ್ನೂ ನಡೆಸದೆ, ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು, 1ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ, 2ನೇ ಎದುರುದಾರರು, ಈಗಾಗಲೇ ಮಾಜಿ ಅಧ್ಯಕ್ಷರಾಗಿರುವುದರಿಂದ ಅವರ ವಿರುದ್ಧ ಕ್ರಮಕೈಗೊಳ್ಳಲು ರಹಾ ಇರುವುದಿಲ್ಲ. ಮೇಲ್ಕಂಡ ಸನ್ನಿವೇಶಗಳಲ್ಲಿ, 1ನೇ ಎದುರುದಾರರಾದ ಶ್ರೀ. ಕರಿಯಪ್ಪ, ಪಿ.ಡಿ.ಓ, ಅವರು ಕರ್ತವ್ಯಲೋಪವೆಸಗಿರುವಂತೆ ಮೇಲ್ನೋಟಕ್ಕೆ ಸಾಕಷ್ಟು ಪುರಾವೆಗಳು ಕಂಡುಬರುತ್ತಿವೆ.

ಈ ಹಿನ್ನೆಲೆಯಲ್ಲಿ ಶ್ರೀ. ಕರಿಯಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನೂಲೇನೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/91/ಗ್ರಾಪಂಕಾ/2017 ಬೆಂಗಳೂರು, ದಿನಾಂಕ–20–03–2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ. ಕರಿಯಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನೂಲೇನೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಜಿಲ್ಲೆ,
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ,
6. ಶ್ರೀ. ಕರಿಯಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನೂಲೇನೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ,
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.